WWF 50 YEARS IN INDIA



# ಒಂದು ಭೂಮಿ ಒಂದು ಮನೆ

## ಹಂತ ೨ ನೋಡಿ ಮತ್ತು ಕಲಿಯಿರಿ

ತರಗತಿಗಳು ೬, ೭ & ೮

ಚಟುವಟಿಕೆ ಪುಸ್ತಕ

ನಮಸ್ತೇ, ಒಂದು ಭೂಮಿ – ಒಂದು ಮನೆ ಕಾರ್ಯಕ್ರಮಕ್ಕೆ ನಿಮಗೆ ಸ್ವಾಗತ!

ನಿಮಗೆ ಗೊತ್ತೇ, ನೀವಲ್ಲದೇ ನಿಮ್ಮ ಮನೆಯಲ್ಲಿ ಇತರ ಜೀವಿಗಳೂ ಕೂಡಾ ಬದುಕುತ್ತಿವೆಯೆಂದು? ಅವುಗಳಲ್ಲಿ ಕೆಲವು ನಮ್ಮ ಕಣ್ಣೆದುರೇ ಓಡಾಡುತ್ತಿರಬಹುದು ಆದರೆ ಕೆಲವು ನಮ್ಮ ಗುಪ್ತ ಸದಸ್ಯರಾಗಿರುತ್ತವೆ!

ನಮ್ಮ ಗ್ರಹ – ಭೂಮಿಯನ್ನು ನಾವು ಹಲವಾರು ಸಸ್ಯಗಳು ಹಾಗೂ ಪ್ರಾಣಿಗಳೊಂದಿಗೆ ಹಂಚಿಕೊಂಡು ಬದುಕುತ್ತಿದ್ದೇವೆ. ಹಾಗಾಗಿ ಅವುಗಳು ಕಾಡುಗಳಲ್ಲಿ ಇರಲಿ ಅಥವಾ ನಮ್ಮ ಮನೆಯಲ್ಲೇ ಇರಲಿ, ನಮ್ಮ ಸಂಪನ್ಮೂಲಗಳನ್ನು ಜಾಗ್ರತೆಯಾಗಿ ಬಳಸುವ ಮೂಲಕ ನಾವು ಅವುಗಳನ್ನು ಗೌರವಿಸಬೇಕು.

ಶಾಶ್ವತವಾದ ಸಂತೋಷದಾಯಕ ಹಾಗೂ ಆರೋಗ್ಯಕರ ಗ್ರಹಕ್ಕಾಗಿ ಸಸ್ಯಗಳು, ಪ್ರಾಣಿಗಳು ಮತ್ತು ಮಾನವರು ಒಟ್ಟಾಗಿ ಅಭಿವೃದ್ಧಿ ಹೊಂದಬೇಕು.

ನಾವು ಪ್ರಕೃತಿಯ ಬಗ್ಗೆ ತಿಳಿದುಕೊಳ್ಳುವುದು, ಹಸಿರು ಅಭ್ಯಾಸಗಳನ್ನು ಅಳವಡಿಸಿಕೊಳ್ಳುವುದು ಮತ್ತು ಪರಿಸರ–ಸ್ನೇಹೀ ಮನೆಗಳನ್ನು ರಚಿಸುವಂಥಾ ಕೆಲವು ಕ್ರಮಗಳನ್ನು ಕೈಗೊಂಡರೆ ಮಾತ್ರ ಇವೆಲ್ಲಾ ಪ್ರಾರಂಭವಾಗುತ್ತದೆ.

ಹಾಗಾಗಿ, ಪ್ರಕೃತಿಯನ್ನು ಶೋಧಿಸುತ್ತಾ ನಿಮ್ಮ ಸಮಯವನ್ನು ಉತ್ತಮವಾಗಿ ಕಳೆಯಲು ಇಂದು ನಾವು ನಿಮಗಾಗಿ ಒಂದು ಭೂಮಿ – ಒಂದು ಮನೆ ಕಾರ್ಯಕ್ರಮವನ್ನು ಪರಿಚಯಿಸುತ್ತಿದ್ದೇವೆ. ಇದರಲ್ಲಿ ಮೂರು ಹಂತಗಳಿವೆ:




## ಹಂತ ೧ – ಅನ್ವೇಷಿಸಿ ಮತ್ತು ಕಂಡು ಹಿಡಿಯಿರಿ



## ಹಂತ ೨ – ನೋಡಿ ಮತ್ತು ಕಲಿಯಿರಿ



## ಹಂತ ೩ – ಚರ್ಚಿಸಿ ಮತ್ತು ಮಾಡಿ



# ಹೆತ್ತವರಿಗೆ/ಪೋಷಕರಿಗೆ ಸೂಚನೆ


“ಒಂದು ಭೂಮಿ – ಒಂದು ಮನೆ", ಇದು, ವಾರಕ್ಕೆ ಕೇವಲ ೩೦ ನಿಮಿಷಗಳ ಸಮಯ ತೆಗೆದುಕೊಳ್ಳುವ ಚಟುವಟಿಕೆಗಳನ್ನೊಳಗೊಂಡ, ಹತ್ತು ವಾರಗಳ ಕಿರು ಕಾರ್ಯಕ್ರಮ.

- ಕಾರ್ಯಹಾಳೆಗಳನ್ನು ಮುದ್ರಿಸಬಹುದು ಅಥವಾ ಒಂದು ಖಾಲಿ ಕಾಗದ/ಟಿಪ್ಪಣಿ ಪುಸ್ತಕದಲ್ಲಿ ಬರೆಯಬಹುದು.

- ಎಲ್ಲಾ ಚಟುವಟಿಕೆಗಳ ಸಮಯದಲ್ಲೂ ನಿಮ್ಮ ಮಕ್ಕಳೊಂದಿಗೆ ಇದ್ದು ಬೆಂಬಲಿಸಿ. ಕಾರ್ಯಹಾಳೆಗಳನ್ನು ಸಂಪೂರ್ಣಗೊಳಿಸಲು ಅವರಿಗೆ ಸಹಾಯ ಮಾಡಿ.

- ಪ್ರತಿಯೊಂದು ಚಟುವಟಿಕೆಯಲ್ಲಿಯೂ ಬೆಂಬಲವಾಗಿ, ಶಿಕ್ಷಕರಿಗೆ ವಾಟ್ಸ್‌ಆಪ್ ಮೂಲಕ ಕಳುಹಿಸಲಾಗುವ ಅಥವಾ ಪ್ರತಿಯೊಂದು ಕಾರ್ಯಹಾಳೆಯೊಂದಿಗೆ ನೀಡಲಾಗುವ ಸಂಪರ್ಕ ಕೊಂಡಿ (ಲಿಂಕ್)ಯ ಮೂಲಕ ಡೌನ್‌ಲೋಡ್ ಮಾಡಬಹುದಾದ ಒಂದು ವೀಡಿಯೋ / ದೃಶ್ಯಚಿತ್ರವಿರುತ್ತದೆ.

- ಯಾವಾಗಲೂ ಅವರ ಚಿಕ್ಕ ಯಶಸ್ಸನ್ನೂ ಪ್ರೋತ್ಸಾಹಿಸಿ ಆನಂದಿಸಿ ಮತ್ತು ಉತ್ತಮ ಕೌಟುಂಬಿಕ ಸಮಯವನ್ನು ಒಂದಾಗಿ ಕಳೆಯಿರಿ.



# ಹಂತ ೨
# ನೋಡಿ ಮತ್ತು ಕಲಿಯಿರಿ

ನಾವು ಅರ್ಧಭಾಗ ಮುಗಿಸಿದ್ದೇವೆ! ಈಗ 'ಒಂದು ಭೂಮಿ – ಒಂದು ಮನೆ' ಯ ಎರಡನೆಯ ಹಂತವನ್ನು ತಲುಪುವ ಸಮಯ. ಇದರಲ್ಲಿ ೩ ಕಾರ್ಯಹಾಳೆಗಳು ಮತ್ತು ೧ ವೀಡಿಯೋ ಇದೆ.

## ಪರಿವಿಡಿ

ವೀಡಿಯೋ ವಿ೨ಎ: ನಮ್ಮ ಆಯ್ಕೆ ಮಹತ್ವವಾಗಿದೆ
ಈ ಗ್ರಹದ ಬಗ್ಗೆ ಕಾಳಜಿಯೊಂದಿಗೆ ಉತ್ತಮ ಹಾಗೂ ಸರಳವಾಗಿ ಕಟ್ಟಲಾಗಿರುವ ಒಂದು ಮನೆಯ ಚಿತ್ರಕಥೆಯನ್ನು ನೋಡಿ.

ಕಾರ್ಯಹಾಳೆ ಡಬ್ಲ್ಯು೨ಎ: ನನ್ನ ಅಭ್ಯಾಸಗಳ ತಪಶೀಲು ಪಟ್ಟಿ
ಕೋಷ್ಟಕದಲ್ಲಿ ನಿಮ್ಮ ಅಭ್ಯಾಸಗಳನ್ನು ಗುರುತಿಸಿ ಹಾಗೂ ನಿಮಗೆ ಹೆಚ್ಚು ಕೈಗುರುತುಗಳು ಸಿಕ್ಕಿವೆಯೋ ಅಥವಾ ಕಾಲ್ಗುರುತುಗಳು ಸಿಕ್ಕಿವೆಯೋ ಲೆಕ್ಕ ಮಾಡಿ.

ಕಾರ್ಯಹಾಳೆ ಡಬ್ಲ್ಯು೨ಬಿ: ನನ್ನ ಮನೆ ಪರಿಸರ–ಸ್ನೇಹಿಯಾಗಿದೆಯೇ?
ನಿಮ್ಮ ಮನೆ ಎಷ್ಟರಮಟ್ಟಿಗೆ ಪರಿಸರ–ಸ್ನೇಹಿಯಾಗಿದೆ ಎಂದು ಪರಿಶೀಲಿಸಿ.

ಕಾರ್ಯಹಾಳೆ ಡಬ್ಲ್ಯು೨ಸಿ: ಕುಟುಂಬದೊಂದಿಗೆ ಮಾತುಕತೆ
ನೀವು ಕಂಡುಕೊಂಡಿರುವುದನ್ನು ಚರ್ಚಿಸಿ ಮತ್ತು ಮನೆಯನ್ನು ಇನ್ನಷ್ಟು ಪರಿಸರ–ಸ್ನೇಹಿಯಾಗಿಸುವುದಕ್ಕೆ ನಿಮ್ಮ ಮನೆಯವರು ಮಾಡಬಹುದಾದ ವಿಷಯಗಳನ್ನು ಬಿಡಿಸಿ.

ಮರುಮನನ ಮತ್ತು ಇನ್ನಷ್ಟು
ನೀವು ಕಲಿತಿರುವುದನ್ನು ಮರುಪರಿಶೀಲಿಸಿ ಮತ್ತು ವರದಿ ಮಾಡಿ.

ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್‌ಡಿಜಿಗಳು) ಸಾಧಿಸಲು ಕೂಡಾ ಒಂದು ಭೂಮಿ – ಒಂದು ಮನೆ ಸಹಾಯ ಮಾಡುತ್ತದೆ.
ಹಂತ ೨ ಈ ಕೆಳಗಿನವುಗಳಿಗಾಗಿ ಇದೆ:

೪ ಗುಣಮಟ್ಟದ ಶಿಕ್ಷಣ — 4 QUALITY EDUCATION

೧೧ ಸುಸ್ಥಿರ ನಗರಗಳು ಮತ್ತು ಸಮುದಾಯಗಳು — 11 SUSTAINABLE CITIES AND COMMUNITIES



# ವೀಡಿಯೋ ವಿಗಎ

ವೀಡಿಯೋದ ಸಮಯ
ಪರಿಸರ ಪರಿಸರ ಎಲ್ಲೆಡೆ ಪರಿಸರ!

ವಸ್ತುತಃ ನಡಿಗೆಯ ಮೂಲಕ ಪ್ರಾರಂಭಿಸುವುದರೊಂದಿಗೆ ನಾವು, ಪ್ರಕೃತಿ ಶೋಧನೆ ಮಾಡೋಣ. ಈ ಸಂಪರ್ಕ ಕೊಂಡಿಯ ಮೂಲಕ ವೀಡಿಯೋವನ್ನು ನೋಡುವುದು.



# ಕಾರ್ಯಹಾಳೆ

## ನನ್ನ ಅಭ್ಯಾಸ ತಪಶೀಲು ಪಟ್ಟಿ

ನಿಮ್ಮ ಟಿಪ್ಪಣಿ ಪುಸ್ತಕದಲ್ಲಿ ಈ ಕೆಳಗೆ ಕೊಟ್ಟಿರುವ ಕೋಷ್ಟಕದಲ್ಲಿ ನೀಡಿರುವ ಕೈಗುರುತು ಮತ್ತು ಕಾಲ್ಗುರುತನ್ನು ಬಿಡಿಸಿ.

| | ಅಭ್ಯಾಸ ತಪಶೀಲುಪಟ್ಟಿ | | | |
|---|---|---|---|---|
| ೧. | ನಾನು ನಲ್ಲಿ ನೀರು ಪೋಲಾಗದಂತೆ ತಡೆಯುತ್ತೇನೆ. | | | |
| ೨. | ನಲ್ಲಿ ನೀರು ತೊಟ್ಟಿಕ್ಕದಂತೆ ತಕ್ಷಣ ಸರಿಪಡಿಸುತ್ತೇನೆ. | | | |
| ೩. | ಸಾಧ್ಯವಾದಲ್ಲೆಲ್ಲಾ ನೀರನ್ನು ಮರುಬಳಕೆ ಮಾಡುತ್ತೇನೆ. | | | |
| ೪. | ಮುಚ್ಚಿದ ಪಾತ್ರೆಯಲ್ಲಿ ಮಳೆ ನೀರನ್ನು ಸಂಗ್ರಹಿಸಿಟ್ಟುಕೊಳ್ಳುತ್ತೇನೆ. | | | |
| ೫. | ನಾನು ನೀರಿನಲ್ಲಿ ಆಟವಾಡುತ್ತೇನೆ. | | | |
| ೬. | ನಲ್ಲಿ ನೀರು ಬಿಟ್ಟುಕೊಂಡು ಹಲ್ಲುಜ್ಜುತ್ತೇನೆ. | | | |
| ೭. | ನನ್ನ ಪುಸ್ತಕದ ಹಾಳೆಗಳನ್ನು ವ್ಯರ್ಥ ಮಾಡುತ್ತೇನೆ. | | | |
| ೮. | ಖರೀದಿಗೆ ಹೋಗುವಾಗ ಚೀಲವನ್ನು ಒಯ್ಯುತ್ತೇನೆ. | | | |
| ೯. | ಅಂಗಡಿಯವರೊಡನೆ ಪ್ಲಾಸ್ಟಿಕ್ ಚೀಲವನ್ನು ಕೇಳುತ್ತೇನೆ. | | | |
| ೧೦. | ಪ್ಲಾಸ್ಟಿಕ್ ಜಾಡಿಯಲ್ಲಿ ನೀರು ಕುಡಿಯುತ್ತೇನೆ. | | | |
| ೧೧. | ಎಲ್ಲಾ ಕಸವನ್ನು ಒಂದೇ ಕಸದ ಬುಟ್ಟಿಗೆ ಹಾಕುತ್ತೇನೆ. | | | |

| | | | | |
|---|---|---|---|---|
| ೧೨. | ಪ್ಲಾಸ್ಟಿಕ್ ಪೊಟ್ಟಣಗಳಲ್ಲಿ ಸಿಗುವ ಆಹಾರವನ್ನು ತಿನ್ನುತ್ತೇನೆ. | | | |
| ೧೩. | ನಾನು ಋತು ಆಧಾರಿತ ಹಣ್ಣುಗಳನ್ನು ತಿನ್ನುತ್ತೇನೆ. | | | |
| ೧೪. | ನಾನು ಗಿಡಗಳನ್ನು ಬೆಳೆಸುತ್ತೇನೆ ಮತ್ತು ಅವುಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ. | | | |
| ೧೫. | ಹಳೆಯದನ್ನು ದುರಸ್ತಿಗೊಳಿಸುವ ಬದಲು ಹೊಸ ವಸ್ತುಗಳನ್ನು ಕೊಳ್ಳುತ್ತೇನೆ. | | | |
| ೧೬. | ನಾನು ಸಸ್ಯ ಮತ್ತು ಪ್ರಾಣಿಗಳ ಕುರಿತು ಕಥೆಗಳನ್ನು ಓದುತ್ತೇನೆ ಹಾಗೂ ಕೇಳುತ್ತೇನೆ. | | | |
| ೧೭. | ಸಸ್ಯಗಳನ್ನು ಬೆಳೆಸಿ ಉಳಿಸಿ ಹಾಗೂ ಪ್ರಾಣಿಗಳಿಗೆ ತೊಂದರೆ ನೀಡಬೇಡಿ ಎಂದು ನಾನು ಇತರರಲ್ಲಿ ಕೇಳಿಕೊಳ್ಳುತ್ತೇನೆ. | | | |
| ೧೮. | ಅಗತ್ಯವಿಲ್ಲದೇ ಉರಿಯುತ್ತಿರುವ ದೀಪಗಳನ್ನು ನಾನು | | | |
| ೧೯. | ಹತ್ತಿರದ ಸ್ಥಳಗಳಿಗೆ ಬೈಕಿನಲ್ಲಿ/ಕಾರಿನಲ್ಲಿ ಹೋಗುತ್ತೇನೆ. | | | |
| ೨೦. | ನಾನು ಪಕ್ಷಿಗಳಿಗೆ, ಕೀಟಗಳಿಗೆ ಮತ್ತು ಇತರ ವನ್ಯ ಜೀವಿಗಳಿಗೆ ಆಹಾರವನ್ನು ನೀಡುತ್ತೇನೆ. | | | |

| ಈಗ ನಿಮಗೆ ಸಿಕ್ಕಿರುವ ಕೈಗುರುತು ಮತ್ತು ಕಾಲ್ಗುರುತುಗಳನ್ನು ಲೆಕ್ಕ ಮಾಡಿ! | | | |
|---|---|---|---|
| | | | |

ನಿಮಗೆ ಯಾವುದು ಹೆಚ್ಚು ದೊರಕಿದೆ?

# ಕಾರ್ಯಹಾಳೆ

ಡಬ್ಲ್ಯೂ೨೮


## ನನ್ನ ಮನೆ ಪರಿಸರ–ಸ್ನೇಹೀ ಮನೆಯಾಗಿದೆಯೇ ?

ನಮ್ಮ ಮನೆಗಳಲ್ಲಿ ನಾವು ನೀರನ್ನು ಬಳಸುತ್ತೇವೆ, ಆಹಾರ ತಯಾರಿಸುತ್ತೇವೆ, ಬಟ್ಟೆ ತೆಗೆದುಕೊಳ್ಳುತ್ತೇವೆ ಹಾಗೂ ಮನೆಯ ಇತರ ಕೆಲಸಗಳನ್ನು ಮಾಡುತ್ತೇವೆ. ನಾವು ವಸ್ತು ಮತ್ತು ವಿಷಯಗಳನ್ನು ಬಳಸುವ ರೀತಿಯಿಂದ, ನಮ್ಮ ಮನೆ ಪರಿಸರ–ಸ್ನೇಹೀಯಾಗಿದೆಯೇ ಅಥವಾ ಇಲ್ಲವೇ ಎಂದು ತಿಳಿಯುತ್ತದೆ.

ಈಗ, ಈ ಕೆಳಗಿನ ಪರಿಸರ–ಸ್ನೇಹೀ ಮನೆಯ ತಪಶೀಲುಪಟ್ಟಿಯನ್ನು ನೋಡಿ. ನೀವು ಮತ್ತು ನಿಮ್ಮ ಕುಟುಂಬವು ಮನೆಯಲ್ಲಿ ಮಾಡುವ ಎಲ್ಲಾ ವಿಷಯಗಳಿಗೆ ಕೋಷ್ಟಕದಲ್ಲಿರುವ ಚೌಕಟ್ಟುಗಳಿಂದ ಕ್ರಮಸಂಖ್ಯೆ ಅಥವಾ ಬಣ್ಣವನ್ನು ನೀಡಿ.

## ನೀರು

### ಪರಿಸರ–ಸ್ನೇಹೀ ಮನೆಯ ತಪಶೀಲುಪಟ್ಟಿ



೧. ಸೋರುತ್ತಿರುವ ನಲ್ಲಿಯನ್ನು ನಾವು ಒಂದೇ ದಿನದೊಳಗೆ ಸರಿಪಡಿಸುತ್ತೇವೆ.




೨. ಸ್ನಾನ ಮಾಡಲು ಬಾಲ್ದಿಯನ್ನು ಬಳಸುತ್ತೇವೆ.




೩. ನೆಲ/ವಾಹನವನ್ನು ಸ್ವಚ್ಛಗೊಳಿಸಲು ಬಟ್ಟೆ ಒಗೆದ ನೀರನ್ನು ಮರುಬಳಸುತ್ತೇವೆ.



೪. ಆನಂತರ ಬಳಸಲೆಂದು ಮುಚ್ಚಳವಿರುವ ಪಾತ್ರೆಯಲ್ಲಿ ಮಳೆಯ ನೀರನ್ನು ಸಂಗ್ರಹಿಸಿ ಇಟ್ಟುಕೊಳ್ಳುತ್ತೇವೆ.



೫. ತರಕಾರಿಯನ್ನು ನಲ್ಲಿ ನೀರು ಬಿಟ್ಟುಕೊಂಡು ತೊಳೆಯುತ್ತೇವೆ.



೬. ಗಿಡಗಳಿಗೆ ಅಗತ್ಯವಿದ್ದಾಗ ಮಾತ್ರ ನೀರುಣಿಸುತ್ತೇವೆ.


## ಆಹಾರ




೧. ನಾವು ತಿನ್ನುವಂಥಾ ಕೆಲವು ಆಹಾರವನ್ನು ನಾವೇ ಬೆಳೆಸುತ್ತೇವೆ.




೨. ಸ್ಥಳೀಯವಾಗಿ ಬೆಳೆಯಲಾಗಿರುವ ಹಣ್ಣು ಮತ್ತು ತರಕಾರಿಗಳನ್ನು ತಿನ್ನುತ್ತೇವೆ.



೩. ವ್ಯರ್ಥವಾಗುವುದನ್ನು ತಪ್ಪಿಸಲು ನಮ್ಮ ಆಹಾರವನ್ನು ಜಾಗ್ರತೆಯಾಗಿ ಇಡುತ್ತೇವೆ.







೪. ಮನೆಯಲ್ಲಿಯೇ ಉಪ್ಪಿನಕಾಯಿ ಮತ್ತು ಹಣ್ಣಿನಪಾಕ (ಜ್ಯಾಮ್) ತಯಾರಿಸುತ್ತೇವೆ.

೫. ತಾಜಾ ಅಡುಗೆಯನ್ನು, ಬೇಕಾದಷ್ಟೇ ಪ್ರಮಾಣದಲ್ಲಿ ಮಾಡುತ್ತೇವೆ.

೬. ಆಹಾರದ ತುಣುಕುಗಳನ್ನು ಗೊಬ್ಬರಕ್ಕೆ ಬಳಸುತ್ತೇವೆ.

## ತ್ಯಾಜ್ಯ








೧. ನಾವು ಹಸಿ ಮತ್ತು ಒಣ ತ್ಯಾಜ್ಯಗಳನ್ನು ಬೇರೆಬೇರೆ ಇಡುತ್ತೇವೆ.

೨. ನಮ್ಮ ಕೈತೋಟಕ್ಕೆ ನಾವೇ ತಯಾರಿಸಿದ ಗೊಬ್ಬರ ಬಳಸುತ್ತೇವೆ.

೩. ಖರೀದಿಗೆ ಹೋಗುವಾಗ ಯಾವಾಗಲೂ ನಮ್ಮದೇ ಚೀಲವನ್ನು ಒಯ್ಯುತ್ತೇವೆ.







೪. ಮನೆಗೆ ಹೊಸ ವಸ್ತು ಖರೀದಿಸುವ ಮೊದಲು ನಾವು ಆಲೋಚಿಸುತ್ತೇವೆ.

೫. ವಿಪರೀತ ಪ್ಲಾಸ್ಟಿಕ್ ಹೊಂದಿರುವ ವಸ್ತುಗಳ ಖರೀದಿಯನ್ನು ದೂರವಿಡುತ್ತೇವೆ.

೬. ಜಾಡಿಗಳು ಮತ್ತು ಕರಡಿಗೆಗಳನ್ನು ನಾವು ಮರುಬಳಸುತ್ತೇವೆ.

| ಲೆಕ್ಕ ಮಾಡಿ – ಬರೆಯಿರಿ! ಈ ಮೂರೂ ಗುಂಪುಗಳಲ್ಲಿ ನೀವು ಎಷ್ಟು ವಿಷಯಗಳನ್ನು ಕೈಗೊಳ್ಳುತ್ತೀರಿ? | | |
|---|---|---|
| ನೀರು | ಆಹಾರ | ತ್ಯಾಜ್ಯ |
| | | |

ಇನ್ನಷ್ಟು ಪರಿಸರ–ಸ್ನೇಹೀ ಮನೆಯಾಗಿಸಲು, ನೀವು ಮತ್ತು ನಿಮ್ಮ ಕುಟುಂಬ ಈ ಮೇಲಿನ ತಪಶೀಲು ಪಟ್ಟಿಯಲ್ಲಿ ನೀಡಿದ ಕ್ರಮಗಳನ್ನು ಕೈಗೊಳ್ಳಬಹುದು.

# ಕಾರ್ಯಹಾಳೆ

ಡಬ್ಲ್ಯು೨ಬಿ

## ಮನೆಯವರೊಂದಿಗೆ ಮಾತುಕತೆ!

ಪರಿಸರ–ಸ್ನೇಹೀ ಮನೆಯ ತಪಶೀಲು ಪಟ್ಟಿಯನ್ನು (ಕಾರ್ಯಹಾಳೆ ಡಬ್ಲ್ಯೂ೨ಬಿ) ನಿಮ್ಮ ಮನೆಯವರಿಗೆ ತೋರಿಸಿ, ನಿಮ್ಮ ಮನೆಗೆ ನೀಡಲಾಗಿರುವ ಅಂಕವನ್ನು ಚರ್ಚಿಸಿ.

ನಿಮ್ಮ ಮನೆಯವರು ಈಗ ಮಾಡುತ್ತಿರುವ ಹಾಗೂ ಇನ್ನೂ ಹೆಚ್ಚಿನ ಪರಿಸರ–ಸ್ನೇಹೀ ಮನೆಯಾಗಿಸುವುದಕ್ಕಾಗಿ ಬದಲಾಯಿಸಿಕೊಳ್ಳಲಿರುವ ವಿಷಯಗಳನ್ನು ನಿರ್ಧರಿಸಿ ಹಾಗೂ ಬರೆಯಿರಿ.

| | ಪ್ರಸ್ತುತ ನನ್ನ ಮನೆಯವರು ಅಷ್ಟೇನೂ ಪರಿಸರ–ಸ್ನೇಹೀ ವಿಷಯಗಳನ್ನು ಕೈಗೊಳ್ಳುತ್ತಿಲ್ಲ. | ನಮ್ಮ ಮನೆಯಲ್ಲಿ ನಾವು ಬದಲಾಯಿಸಿಕೊಳ್ಳಲಿರುವ ವಿಷಯಗಳು |
|---|---|---|
| ನೀರು | | |
| ಆಹಾರ | | |
| ತ್ಯಾಜ್ಯ | | |

# ಮರುಮನನದ ಸಮಯ!

ಅಭಿನಂದನೆಗಳು! ನೀವು ೨ನೆಯ ಹಂತವನ್ನು ಪೂರ್ಣಗೊಳಿಸಿದ್ದೀರಿ.

ನಾವು ಇಲ್ಲಿಯವರೆಗೆ ಏನನ್ನು ಕಲಿತಿದ್ದೇವೆ ನೋಡೋಣ! ಈ ಕೆಳಗಿನ ಕೋಷ್ಟಕದಲ್ಲಿ ನಿಮಗೆ ಈ ಮೊದಲೇ ತಿಳಿದಿದ್ದ ಮತ್ತು ಈಗ ಕಲಿತಿರುವ ಎಲ್ಲಾ ವಿಷಯಗಳನ್ನೂ ಬರೆಯಿರಿ.

| ೧. ೧. ನನಗೆ ಈ ಮೊದಲೇ ತಿಳಿದಿದ್ದ ವಿಷಯಗಳು | ೨. ೨. ನಾನು ಈಗ ಕಲಿತಿರುವ ವಿಷಯಗಳು |
|---|---|
| | |

ಹಂತ 2, ಪೂರ್ಣಗೊಂಡ ನಂತರ ಪಾಂಡಾ ಬಾಟ್ ನಿಮಗೆ 'ಒಂದು ಭೂಮಿ ಒಂದು ಮನೆ' ಬ್ಯಾಡ್ಜ್. ನೀಡಲು ಬಯಸಿದೆ. ಈ ಲಿಂಕ್‌ನಿಂದ ಬ್ಯಾಡ್ಜ್ ಅನ್ನು ಇದೀಗ ಡೌನ್‌ಲೋಡ್ ಮಾಡಿ:

https://www.wwfindia.org/about_wwf/environmental_education/one_earth_one_home/step_two_badge.cfm

